
## ಕಥೋಪದೇಶ

# ಪ್ರೀತಿಯ ಮಹಿಮೆ

ಸತ್ಯವಂತನೆಂಬ ಯುವಕ ನಿದ್ದ. ಹೆಸರಿಗೆ ತಕ್ಕಂತೆ ಅವನ ನಡತೆ ಇರಲಿಲ್ಲ. ಅವನು ತಂದೆ ತಾಯಿಯರಿಗೆ ತುಂಬ ಕಷ್ಟ ಕೊಡುತ್ತಿದ್ದ. ಒಮ್ಮೆ ಅವನು ಮನೆಯಿಂದ ಸಾಕಷ್ಟು ಹಣ ವನ್ನು ದೋಚಿಕೊಂಡು ಓಡಿ ಹೋದನು.



ಅನೇಕ ವರ್ಷಗಳು ಕಳೆದವು. ಸತ್ಯವಂತನು ಈಗ ಒಂದು ಕಳ್ಳರ ಗುಂಪನ್ನು ಸೇರಿಕೊಂಡಿದ್ದ. ತನ್ನೂರನ್ನು ಬಿಟ್ಟು ಬಹುದೂರ ಹೋಗಿಬಿಟ್ಟಿದ್ದ. ತಾಯಿತಂದೆಯರಿಗೆ ಅವನ ಸುಳಿವು ಸಿಕ್ಕಲೇ ಇಲ್ಲ.

ಒಂದು ದಿನ ರಾತ್ರಿ ಸತ್ಯವಂತನು ಒಂದು ಮನೆಗೆ ಕದಿಯುವುದಕ್ಕೆ ಹೋದ. ಮನೆಯ ಬೈಠಕ್‌ಖಾನೆಯನ್ನು ಪ್ರವೇಶಿಸಿದ. ಅಲ್ಲಿ ಅವನಿಗೆ ಒಂದು ಚಿತ್ರ ಕಾಣಿಸಿತು. ಅದರ ಮುಂದೆ ಒಂದು ಮಿಣುಕು ವಿದ್ಯುದ್ದೀಪ ಉರಿಯುತ್ತಿತ್ತು. ಅದಕ್ಕೆ ಹಾರ ಹಾಕಿ ಅಲಂಕರಿಸಿದ್ದರು. ಒಂದು ಬಾಡಿಹೋದ ಹೂವೂ ಅದರ ಮುಂದೆ ಇತ್ತು.

ಅವನು ಅದನ್ನು ದಿಟ್ಟಿಸಿ ನೋಡಿದ. ಅದು ತನ್ನದೇ ಚಿತ್ರವಾಗಿತ್ತು. ಆಶ್ಚರ್ಯ! ಅದು ಹೇಗೆ ಇಲ್ಲಿ ಬಂತು? ತಾನು ಕದಿಯಲು ಬಂದಿರುವುದು ತನ್ನ ಮನೆಯೇ ಆಗಿರಬಹುದೆ? ತಂದೆತಾಯಿಯರು ವರ್ಗವಾಗಿ ಈ ಊರಿಗೆ ಬಂದಿರಬಹುದಲ್ಲ!

ಅವನು ಎಲ್ಲವನ್ನೂ ಪರೀಕ್ಷಿಸಿ ನೋಡಿದ ಮೇಲೆ ಅದು ತನ್ನ ತಂದೆತಾಯಿಯರ ಮನೆಯೇ ಎಂದು ಖಾತರಿಯಾಯಿತು.

ಈಗ ಸತ್ಯವಂತನು ಮತ್ತೊಮ್ಮೆ ಚಿತ್ರವನ್ನು ನೋಡಿದ. ಆಗ ಅವನಿಗೆ ಹೊಳೆಯಿತು, ತಂದೆ ತಾಯಿಯರು ತನ್ನನ್ನು ಎಷ್ಟೊಂದು ಪ್ರೀತಿಸುತ್ತಾರೆ ಎಂದು. ಅವನ ಮನಸ್ಸು ಪರಿವರ್ತನಗೊಂಡಿತು. ಅವನು ಮುಂದೆ ನಿಜವಾಗಿಯೂ ಸತ್ಯವಂತನಾದ.

ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ—'ತಾಯಿಗೆ ಕೆಟ್ಟ ಮಗ ಹುಟ್ಟಬಹುದಾದರೂ ಎಂದಿಗೂ ಕೆಟ್ಟ ತಾಯಿ ಇರುವುದಿಲ್ಲ.'

# ಶತ್ರುತ್ವ ನಮ್ಮನ್ನೇ ನಾಶಮಾಡುತ್ತದೆ.

ಕುಬುದ್ಧಿಗೆ ಸುಬುದ್ಧಿಯನ್ನು ಕಂಡರೆ ಬದ್ಧದ್ವೇಷ. ಅವನನ್ನು ಹೇಗಾದರೂ ಮಾಡಿ ನಾಶ ಮಾಡಬೇಕೆಂದು ಹೊಂಚು ಹಾಕುತ್ತಿದ್ದನು. ಒಮ್ಮೆ ಇಬ್ಬರೂ ಒಂದೇ ದೋಣಿಯಲ್ಲಿ ಪ್ರಯಾಣ ಮಾಡುವ ಸಂದರ್ಭ ಒದಗಿಬಂತು. ದೋಣಿಯಲ್ಲಿ ಮತ್ತಾರೂ ಪ್ರಯಾಣಿಕರಿರಲಿಲ್ಲ. ದೋಣಿ ನಡೆಸುವವನು ಮಾತ್ರ ಇದ್ದ. ಕುಬುದ್ಧಿಗೆ ಚೆನ್ನಾಗಿ ಈಜು ಬರುತ್ತಿತ್ತು. ಸುಬುದ್ಧಿಗೆ ಬರುತ್ತಿರಲಿಲ್ಲ. ಅದು ಕುಬುದ್ಧಿಗೆ ತಿಳಿದಿತ್ತು. ದೋಣಿ ನಡೆಸುವವನಿಗೆ ಹೇಗೂ ಈಜು ಬರುತ್ತದೆ ಎಂಬ ಭರವಸೆ ಅವನಿಗಿತ್ತು.

ಕುಬುದ್ಧಿ ದೋಣಿಯನ್ನು ಜೋರಾಗಿ ಅಲುಗಾಡಿಸ ತೊಡಗಿದನು. ಸಮತೋಲ ತಪ್ಪಿ ಮೂವರೂ ನೀರು ಪಾಲಾದರು. ನದಿ ತುಂಬ ದೊಡ್ಡದು. ಆದರೆ ಅಷ್ಟೊಂದು ಸೆಳವು ಇರಲಿಲ್ಲ. ಕುಬುದ್ಧಿಯು ಕೂಡಲೆ ದಡದ ಕಡೆ ಈಜತೊಡಗಿದನು.

ಆದರೆ ಅವನ ದುರದೃಷ್ಟಕ್ಕೆ ಒಂದು ಮೊಸಳೆ ಅವನಿಗೆದುರಾಯಿತು. ಈಗ ಅದರಿಂದ ತಪ್ಪಿಸಿಕೊಳ್ಳುವ